ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾವೇರಿ-581110

OFFICE OF THE DEPUTY COMMISSIONER, HAVERI, 581110

ದೂರವಾಣಿ : / Téléphone: 08375-249044,249015 (Fax) 08375-249088/19.

Email: deo.haveri@gmail.com

ನಂ.ಎಲ್‌ಜಿಎಲ್:ವಹಿ: 37 :2017-18

ದಿನಾಂಕ: 12-07-2019

**ವಿಷಯ:** ಕೆಶಿಪ್-3ರ ಯೋಜನೆಯಲ್ಲಿ ಗದಗ ದಿಂದ ಹೊನ್ನಾಳಿ ವರೆಗೆ ರಸ್ತೆ ಅಗಲೀಕರಣಕ್ಕಾಗಿ ಅಗತ್ಯವಾದ 2.2480ಹೆ (5ಎ-22ಗುಂ)ಅರಣ್ಯ ಭೂಮಿಗೆ ಪರ್ಯಾಯವಾಗಿ ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ 2.2480ಹೆ(6ಎ-10ಗುಂ) ಜಮೀನು ವರ್ಗಾಯಿಸುವ ಕುರಿತು.

**ಉಲ್ಲೇಖ:**
1) ಈ ಕಾರ್ಯಾಲಯದ ಸಮ ಸಂಖ್ಯೆ ಆದೇಶ ದಿನಾಂಕ10/08/2018.
2) ಮುಖ್ಯಯೋಜನಾಧಿಕಾರಿಗಳು ಯೋ.ಅ.ಘ.ಕ.ರಾ.ಹೆ.ಅ.ಯೋಜನೆ ಬೆಂಗಳೂರು ಇವರ ಪತ್ರ ಕೆಶಿಫ್-3:ಅರಣ್ಯ :ಎಡಿಬಿ(2):ಸಿಆರ್-5 :2016-17 ದಿ: 18-01-2019 ಹಾಗೂ 25-05-2019.
3) ಉಪ ವಿಭಾಗಾಧಿಕಾರಿಗಳು ಹಾವೇರಿ ಇವರ ಪತ್ರ ಕ್ರ.ಎಲ್‌ಜಿಎಲ್: ವಹಿ:06:2019-20 ದಿ :03-06-2019.
4) ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ.71

*****

| | |
|---|---|
| CPO | |
| PD | |
| CAO | |
| SPL. D.C | |
| DS (F) | |
| SE-1 | |
| SE-2 | |
| SE-3 | |
| FE | |
| AD | |

**ಪ್ರಸ್ತಾವನೆ:**

ಕೆಶಿಪ್-3ರ ಯೋಜನೆಯಲ್ಲಿ ಗದಗ ದಿಂದಾ ಹೊನ್ನಾಳಿ ರಸ್ತೆ ಅಭಿವೃದ್ಧಿ ಪಡಿಸಲು ಹಾವೇರಿ ಜಿಲ್ಲೆಯ ರಾಣೇಬೆನ್ನೂರ,ಹಿರೇಕೆರೂರು ತಾಲೂಕು ಗ್ರಾಮಗಳಿಗೆ ಸಂಬಂಧಿಸಿದ ಅರಣ್ಯ ಇಲಾಖೆಯ 2.2480 ಹೆಕ್ಟರ್ ಜಮೀನನ್ನು ಸ್ವಾಧಿನತೆಗೆ ನೀಡಲಾಗಿರುವುದರಿಂದ ಇದಕ್ಕೆ ಪರ್ಯಾಯವಾಗಿ ಹಾವೇರಿ ತಾಲೂಕ ಭರಡಿ ಗ್ರಾಮದ ರಿಸನಂ. 1/1ಅ ಕ್ಷೇತ್ರ 186ಎ-29ಗುಂ-07ಆಣೆ (ಹುಲ್ಲುಗಾವಲು) ಜಮೀನಿನ ಪೈಕಿ 5ಎ-20ಗುಂ ಜಮೀನನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ವಿಭಾಗ ಹಾವೇರಿ ಇವರ ಹೆಸರಿಗೆ ಸಾಕಷ್ಟು ಗಿಡಮರಗಳನ್ನು ಬೆಳೆಸುವ ಮತ್ತು ಜಾನುವಾರುಗಳಿಗೆ ಮೇಯಲು ಅವಕಾಶ ನೀಡುವ ಶರತ್ತುಗಳಿಗೊಳಪಟ್ಟು ವರ್ಗಾಯಿಸಿ ಉಲ್ಲೇಖ (1)ರ ಈ ಕಾರ್ಯಾಲಯದ ಆದೇಶದಲ್ಲಿ ಕಾಯ್ದಿರಿಸಿ ಆದೇಶಿಸಿದ್ದು ಇರುತ್ತದೆ.

ಮುಖ್ಯಯೋಜನಾಧಿಕಾರಿಗಳು ಯೋ.ಅ.ಫ.ಕ.ರಾ.ಹೆ.ಅ.ಯೋಜನೆ ಬೆಂಗಳೂರು ಇವರು ಗದಗ ದಿಂದಾ ಹೊನ್ನಾಳಿ ರಸ್ತೆ ಅಭಿವೃದ್ಧಿ ಪಡಿಸಲು ಅಗತ್ಯವಾದ 2.2480 ಹೆಕ್ಟರ್ (5ಎ-22ಗುಂಟೆ)ಅರಣ್ಯ ಜಮೀನಿನ ಬದಲಾಗಿ ಸಮಪ್ರಮಾಣದ ಅರಣ್ಯೇತರ ಜಮೀನನ್ನು ಹಾವೇರಿ ಜಿಲ್ಲೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕಾಗಿರುವದರಿಂದ ಕಡಿಮೆ ಬೀಳುವ 2ಗುಂಟೆ ಜಮೀನು ಸೇರಿಸಿ 5ಎ-22ಗುಂಟೆ ಅಥವಾ ಅದಕ್ಕೆ ಮೇಲ್ಪಟ್ಟ ಅರಣ್ಯೇತರ ಜಮೀನನ್ನು ಸೂಕ್ತ ದಾಖಲೆಗಳೊಂದಿಗೆ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಉಲ್ಲೇಖ (2) ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಉಪವಿಭಾಗಾಧಿಕಾರಿಗಳು ಹಾವೇರಿ ಇವರು ಉಲ್ಲೇಖ 3ರಲ್ಲಿ ವರದಿ ಸಲ್ಲಿಸಿ ಹಾವೇರಿ ತಾಲೂಕ ಭರಡಿ ಗ್ರಾಮದ ರಿಸನಂ.1/1ಅ ಕ್ಷೇತ್ರ 186ಎ-29ಗುಂ-07ಆಣೆ ಜಮೀನು ಸರಕಾರ ಅಂತಾ ಪಹಣಿ ಪತ್ರಿಕೆಯ ಕಾಲಂ ನಂ 9ರಲ್ಲಿ ನಮೂದು ಇದ್ದು, ಮೂಲತಹ ಹುಲ್ಲುಗಾವಲು ಕುರಣ ಅಂತಾ ಇದ್ದು, ಬ ಖರಾಬ ಇರುವದಾಗಿಯೂ ಹಾಗೂ ಈ ಜಮೀನು ಜಾನುವಾರುಗಳಿಗೆ ಮೇಯಲು ಯೋಗ್ಯವಾಗಿರುವುದಿಲ್ಲ, ಗಿಡಮರಗಳನ್ನು ಬೆಳೆಸಲು ಯೋಗ್ಯವಿರುವುದಾಗಿ ವರದಿ ಸಲ್ಲಿಸಿದ್ದು,ಇದರಲ್ಲಿ ಅರಣ್ಯ ಜಮೀನಿಗೆ ಹೊಂದಿಕೊಂಡಿರುವ 06ಎ-10ಗುಂಟೆ ಜಮೀನನ್ನು ಮಂಜೂರಿಲು ಪ್ರಕರಣ ಸಲ್ಲಿಸಿರುತ್ತಾರೆ.

Scanned with CamScanner

49

ಉಪವಿಭಾಗಾಧಿಕಾರಿಗಳು ಸಲ್ಲಿಸಿದ ಪ್ರಸ್ತಾವನೆಯಂತೆ ಗದಗ ದಿಂದಾ ಹೊನ್ನಾಳಿ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಒಳಪಡುವ 2.2480 ಹೆಕ್ಟರ್ ಅರಣ್ಯ ಭೂಮಿಗೆ ಪರ್ಯಾಯವಾಗಿ ಈ ಹಿಂದೆ ಮಂಜೂರು ಮಾಡಿದ 05ಎ–20ಗುಂಟೆ ಜಮೀನಿನ ಆದೇಶವನ್ನು ರದ್ದುಪಡಿಸಿ 06ಎ–10ಗುಂಟೆ ಜಮೀನನ್ನು ಮಂಜೂರು ಮಾಡುವ ಕುರಿತು ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ**

ಮೇಲ್ಕಾಣಿಸಿದ ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಹಾವೇರಿ ಜಿಲ್ಲೆ ರಾಣೇಬೆನ್ನೂರು ಹಾಗೂ ಹಿರೇಕೆರೂರು ತಾಲೂಕಿನ ಗ್ರಾಮಗಳಿಗೆ ಸಂಬಂಧಿಸಿದ ಅರಣ್ಯ ಇಲಾಖೆಯ 2.2480 ಹೆಕ್ಟರ್ ಜಮೀನನ್ನು ಕೆಶಿಫ್–3ರ ಯೋಜನೆಯಡಿ ಗದಗ ದಿಂದ ಹೊನ್ನಾಳಿ ವರೆಗೆ ರಸ್ತೆ ನಿರ್ಮಾಣಕ್ಕಾಗಿ ಸ್ವಾಧಿನತೆಗೆ ನೀಡಲಾಗಿರುವುದರಿಂದ ಇದಕ್ಕೆ ಪರ್ಯಾಯವಾಗಿ ಹಾವೇರಿ ತಾಲೂಕ ಭರಡಿ ಗ್ರಾಮದ ರಿಸನಂ. 1/1ಅ ಕ್ಷೇತ್ರ 186ಎ–29ಗುಂ–07ಆಣೆ ಜಮೀನಿನ ಪೈಕಿ 5ಎ–20ಗುಂ ಜಮೀನನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ವಿಭಾಗ, ಹಾವೇರಿ ಇವರ ಹೆಸರಿಗೆ ವರ್ಗಾಯಿಸಿ ಕಾಯ್ದಿರಿಸಿದ ಉಲ್ಲೇಖ 1ರ ಆದೇಶವನ್ನು ರದ್ದುಪಡಿಸಿದೆ, ಹಾಗೂ ಇದೇ ಗ್ರಾಮದ ರಿಸನಂ. 1/1ಅ ಕ್ಷೇತ್ರ 180ಎ–19ಗುಂ–07ಆಣೆ ಜಮೀನಿನ ಪೈಕಿ ಕಂದಾಯ ನಕ್ಷೆಯಲ್ಲಿ ತೋರಿಸಿದಂತೆ ಹಾಗೂ ಈ ಕೆಳಕಾಣಿಸಿದ ಚೆಕಬಂದಿ ನಡುವೆ ಇರುವ ಅರಣ್ಯ ಜಮೀನಿಗೆ ಹೊಂದಿಕೊಂಡಿರುವ 6ಎ–10ಗುಂ ಜಮೀನನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ವಿಭಾಗ ಹಾವೇರಿ ಇವರ ಹೆಸರಿಗೆ ಸಾಕಷ್ಟು ಗಿಡಮರಗಳನ್ನು ಬೆಳೆಸುವ ಮತ್ತು ಜಾನುವಾರುಗಳಿಗೆ ಮೇಯಲು ಅವಕಾಶ ನೀಡುವ ಶರತ್ತುಗಳಿಗೊಳಪಟ್ಟು ವರ್ಗಾಯಿಸಿ ಕಾಯ್ದಿರಿಸಿ ಆದೇಶಿಸಿದೆ.

**ಜಮೀನಿನ ಚೆಕಬಂದಿ**

ಉತ್ತರಕ್ಕೆ : ರಿಸನಂ 1/1ಅ ಪೈಕಿ ಉಳಿದ ಜಮೀನು
ದಕ್ಷಿಣಕ್ಕೆ : ರಿಸನಂ.1/1ಅ ಪೈಕಿ ಉಳಿದ ಜಮೀನು
ಪೂರ್ವಕ್ಕೆ : ರಿಸನಂ.1/1ಅ ಪೈಕಿ ಉಳಿದ ಜಮೀನು
ಪಶ್ಚಿಮಕ್ಕೆ : ಕನವಳ್ಳಿ ಗ್ರಾಮದ ಗಡಿ

ಸಹಿ/–
ಜಿಲ್ಲಾಧಿಕಾರಿಗಳು
ಹಾವೇರಿ ಜಿಲ್ಲೆ, ಹಾವೇರಿ

**ಪ್ರತಿ :**

1)ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
2)ಮಾನ್ಯ ಪ್ರಾದೇಶಿಕ ಆಯುಕ್ತರು ಬೆಳಗಾವಿ ಇವರಿಗೆ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
3)ಮುಖ್ಯ ಯೋಜನಾಧಿಕಾರಿಗಳು ಯೋಜನಾ ಅನುಷ್ಠಾನ ಘಟಕ ಕ.ರಾಹೆ.ಅ.ಯೋ ಬೆಂಗಳೂರು ಇವರಿಗೆ
4)ಅಧೀಕ್ಷಕ ಅಭಿಯಂತರರು–2, ಯೋಜನಾ ಅನುಷ್ಠಾನ ಘಟಕ, ಕೆಶಿಪ್ ಬೆಂಗಳೂರು ಇವರಿಗೆ
5)ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ ಹಾವೇರಿ ಜಿಲ್ಲೆ ಹಾವೇರಿ ಇವರಿಗೆ
6)ವಿಶೇಷ ಜಿಲ್ಲಾಧಿಕಾರಿಗಳು ಭೂಸ್ವಾ ಯೋ.ಅ.ಘ.ಕ, ರಾ.ಹೆ.ಅಯೋ ಬೆಂಗಳೂರು ಇವರಿಗೆ
7)ಕಾರ್ಯಪಾಲಕ ಅಭಿಯಂತರರು ಕೆಶಿಪ್ ವಿಭಾಗ ಶಿವಮೊಗ್ಗ ಇವರಿಗೆ
8)ಹೆಚ್ಚುವರಿ ಸಹಾಯಕ ಆಯುಕ್ತರು(ಭೂಸ್ವಾ) ಬೆಂಗಳೂರು/ಬೆಳಗಾವಿ ಇವರಿಗೆ
9)ಸಹಾಯ ಅರಣ್ಯ ಸಂರಕ್ಷಣಾಧಿಕಾರಿಗಳು ಯೋಜನಾ ಅನುಷ್ಠಾನ ಘಟಕ ಕೆಶಿಪ್ ಬೆಂಗಳೂರು ಇವರಿಗೆ
10)ಉಪ ವಿಭಾಗಾಧಿಕಾರಿಗಳು ಹಾವೇರಿ ಇವರಿಗೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆಶಿಪ್ ಉಪ ವಿಭಾಗ ಹಾನಗಲ್ ಇವರಿಗೆ
12)ತಹಶೀಲ್ದಾರ ರಾಣೇಬೆನ್ನೂರು/ಹಿರೇಕೆರೂರು ಇವರಿಗೆ
13)ತಹಶೀಲ್ದಾರರು ಹಾವೇರಿ ಇವರಿಗೆ ಮೂಲ ಪ್ರಕರಣ ಪುಟ ಸಂಖ್ಯೆ 01 ರಿಂದ ___ರ ವರೆಗೆ ಲಗತ್ತಿರಿಸಿ ನಿಯಮಾನುಸಾರ ಕ್ರಮ ಜರುಗಿಸಲು ರವಾನಿಸಿದೆ.

ಅಪರ ಜಿಲ್ಲಾಧಿಕಾರಿಗಳು
ಹಾವೇರಿ ಜಿಲ್ಲೆ, ಹಾವೇರಿ

Keship